# 2. ವಿಪತ್ತು ನಿರ್ವಹಣೆ ಕಾರ್ಯಕ್ರಮ:

## 2.1 ಪ್ರಸ್ತಾವನೆ:

ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಕಾರ್ಯಕ್ರಮವು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಕಲ್ಪನೆಯಿಂದ ಹೊರಬಂದಿರುವ ಅಪೂರ್ವ ಕಾರ್ಯಕ್ರಮವಾಗಿದೆ. ಮಾತೃಶ್ರೀ ಅಮ್ಮನವರು ಈ ಕಾರ್ಯಕ್ರಮಕ್ಕೆ **"ಶೌರ್ಯ" ವಿಪತ್ತು ಸೇವಾ ಸಮಿತಿ, ಧರ್ಮಸ್ಥಳ** ಎಂಬ ಹೆಸರಿನಿಂದ ಗುರುತಿಸಿದ್ದಾರೆ. ವಿಪತ್ತು ಸೇವಾ ಕಾರ್ಯಕ್ರಮವು ಪ್ರಾಕೃತಿಕ ಅಥವಾ ಮಾನವನಿರ್ಮಿತ ವಿಪತ್ತಿನಂತಹ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸ್ಪಂದನೆ ನೀಡುವ ಕಾರ್ಯಕ್ರಮವಾಗಿದೆ. ಆಪತ್ತಿನ ಸಮಯದಲ್ಲಿ ನೆರವಿಗೆ ಧಾವಿಸಲು ಸಜ್ಜಾಗಿ ನಿಲ್ಲಬಲ್ಲ ತಜ್ಞತೆ ಹೊಂದಿದ ಯುವಕರ ತಂಡವನ್ನು ಈ ಕಾರ್ಯಕ್ರಮದ ಅಡಿಯಲ್ಲಿ ರಚಿಸಲಾಗಿದೆ. ಸಮಯದ ಮುಖ ನೋಡದೇ, ಸಂಬಂಧಗಳು, ಜಾತಿ, ಧರ್ಮವನ್ನು ತಾಳೆ ಹಾಕದೆ, ಯಾರೇ ಸಂಕಷ್ಟಕ್ಕೆ ಒಳಗಾಗಲಿ, ವಿಪತ್ತಿಗೆ ತುತ್ತಾಗಿರಲಿ, ಅವರಿಗೆ ತತ್‌ಕ್ಷಣ ಆಸರೆಯಾಗಬಲ್ಲ ಯುವಕರ ಗುಂಪು "ಶೌರ್ಯ" ತಂಡವಾಗಿದೆ.

"ಶೌರ್ಯ" ತಂಡದಲ್ಲಿ ಸದಸ್ಯತ್ವ ಪಡೆದಿರುವ ಸದಸ್ಯರು ವಿಪತ್ತು ನಿರ್ವಹಣೆಯ ವಿಷಯದಲ್ಲಿ ತಜ್ಞತೆ ಹೊಂದಿರುವುದು ಮಾತ್ರವಲ್ಲದೆ, ಆಸ್ಪತ್ರೆಗಳು, ಪೊಲೀಸ್ ಠಾಣೆಗಳು, ಅಗ್ನಿಶಾಮಕದಳ, ಜಿಲ್ಲಾಡಳಿತ, ತಾಲ್ಲೂಕು ಆಡಳಿತ, ಜನಪ್ರತಿನಿಧಿಗಳು, ಮುಖಂಡರು, ಸಂಘ ಸಂಸ್ಥೆಗಳು ಹಾಗೂ ವಿವಿಧ ಅಧಿಕಾರಿಗಳ ಪರಿಚಯ ಹೊಂದಿರುತ್ತಾರೆ. ಯಾವ ವಿಪತ್ತಿಗೆ ಯಾರೊಂದಿಗೆ ಸಂವಹನ ನಡೆಸಬೇಕೆಂಬ ಮಾಹಿತಿ ವಿಪತ್ತು ನಿರ್ವಹಣೆ ಘಟಕದ ಸ್ವಯಂಸೇವಕರಲ್ಲಿರುತ್ತದೆ. ಸಮವಸ್ತ್ರದಲ್ಲಿ ಕಾಣಿಸಿಕೊಳ್ಳುವ, ತುರ್ತು ಸ್ಪಂದನೆಗೆ ಸದಾ ಸಿದ್ಧರಿರುವ ಈ ಯುವಕರ ತಂಡ ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್ (ರಾಷ್ಟ್ರೀಯ ತುರ್ತು ಸ್ಪಂದನೆ ಪಡೆ) ರಾಜ್ಯ ಸರ್ಕಾರದ ಎಸ್.ಡಿ.ಆರ್.ಎಫ್(ರಾಜ್ಯ ತುರ್ತು ಸ್ಪಂದನೆ ಪಡೆ) ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಗ್ರಹರಕ್ಷಕದಳ, ವಿವಿಧ ಸಂಘ ಸಂಸ್ಥೆಗಳಿಂದ ತರಬೇತಿಯನ್ನು ಪಡೆದಿರುತ್ತದೆ. ದುರಂತಗಳನ್ನು ಎದುರಿಸಲು ಸದಾ ಸಿದ್ಧವಿರುತ್ತದೆ.

## 2.2 ಕಾರ್ಯಕ್ರಮ ಅನುಷ್ಠಾನದ ತಾಲ್ಲೂಕುಗಳು:

ಶೌರ್ಯ ವಿಪತ್ತು ನಿರ್ವಹಣಾ ಕಾರ್ಯಕ್ರಮವು ಕರ್ನಾಟಕ ರಾಜ್ಯದ 11 ಜಿಲ್ಲೆಯ 50 ತಾಲ್ಲೂಕುಗಳಲ್ಲಿ ಅನುಷ್ಠಾನಗೊಂಡಿದೆ. ಊರಿನಲ್ಲಿ ಸಮಾಜಪರ ಕಾಳಜಿ ಹೊಂದಿರುವ ಯುವಕ, ಯುವತಿಯರನ್ನು ಸ್ವಯಂಸೇವಕರನ್ನಾಗಿ ಆಯ್ಕೆ ಮಾಡಿ ಅವರನ್ನು ಎನ್‌ಡಿಆರ್‌ಎಫ್, ಅಗ್ನಿಶಾಮಕದಳದ ಮುಖೇನ ತರಬೇತುಗೊಳಿಸುವುದರ ಮೂಲಕ ಸೇರ್ಪಡೆಗೊಳಿಸಲಾಗುತ್ತಿದೆ. ಹೀಗೆ ತಾಲೂಕು ಸಮಿತಿಯಲ್ಲಿರುವ ಇವರು ಗ್ರಾಮಮಟ್ಟದಲ್ಲಿ 10ರಿಂದ 20 ಸದಸ್ಯರುಳ್ಳ ಘಟಕಗಳನ್ನು ಹೊಂದಿಕೊಂಡು ಸಾಮಾಜಿಕ ಹಾಗೂ ವಿಪತ್ತು ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದಾರೆ. ತಾಲೂಕುವಾರು ಸದಸ್ಯರ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಜಿಲ್ಲೆ | ತಾಲೂಕು | ಸ್ವಯಂಸೇವಕರು, ಸಂಯೋಜಕರು | ಕ್ರ.ಸಂ. | ಜಿಲ್ಲೆ | ತಾಲೂಕು | ಸ್ವಯಂಸೇವಕರು, ಸಂಯೋಜಕರು |
|---|---|---|---|---|---|---|---|
| 1 | ದ.ಕ | ಬೆಳ್ತಂಗಡಿ | 172 | 26 | ಹಾಸನ | ಸಕಲೇಶಪುರ | 78 |
| 2 | | ಗುರುವಾಯನಕೆರೆ | 105 | 27 | | ಆಲೂರು | 32 |
| 3 | | ಸುಳ್ಯ | 132 | 28 | | ಹಾಸನ | 86 |
| 4 | | ಕಡಬ | 108 | 29 | | ಶಾಂತಿಗ್ರಾಮ | 43 |
| 5 | ಉ.ಕ | ಕುಮಟಾ | 143 | 30 | | ಬೇಲೂರು | 105 |
| 6 | | ಹೊನ್ನಾವರ | 96 | 31 | ಚಿಕ್ಕಮಗಳೂರು | ಚಿಕ್ಕಮಗಳೂರು | 47 |
| 7 | | ಭಟ್ಕಳ | 93 | 32 | | ಮೂಡಿಗೆರೆ | 129 |
| 8 | | ಅಂಕೋಲಾ | 32 | 33 | | ಕೊಪ್ಪ | 148 |
| 9 | | ಕಾರವಾರ | 83 | 34 | | ಶೃಂಗೇರಿ | 93 |
| 10 | | ಹಳಿಯಾಳ | 40 | 35 | | ಎನ್.ಆರ್.ಪುರ | 28 |
| 11 | | ಯಲ್ಲಾಪುರ | 73 | 36 | | ಕಳಸ | 48 |
| 12 | | ಮುಂಡಗೋಡ | 40 | 37 | ಉಡುಪಿ | ಉಡುಪಿ | 119 |
| 13 | ಧಾರವಾಡ | ಧಾರವಾಡ-1 | 120 | 38 | | ಕುಂದಾಪುರ | 123 |
| 14 | | ಧಾರವಾಡ-2 | 88 | 39 | ಬಾಗಲಕೋಟ | ಬಾಗಲಕೋಟ | 105 |
| 15 | | ನವಲಗುಂದ | 108 | 40 | | ಬೀಳಗಿ | 38 |
| 16 | | ಕುಂದಗೋಳ | 112 | 41 | | ಜಮಖಂಡಿ | 52 |
| 17 | ಚಿಕ್ಕೋಡಿ | ಚಿಕ್ಕೋಡಿ | 142 | 42 | | ರಬಕವಿ | 48 |
| 18 | | ಅಥಣಿ | 107 | 43 | | ಬನಹಟ್ಟಿ | 4 |

| | | | | | | | |
|---|---|---|---|---|---|---|---|
| 19 | | ಕಾಗವಾಡ | 80 | 44 | | ಮುಧೋಳ | 160 |
| 20 | | ನಿಪ್ಪಾಣಿ | 65 | 45 | | ಬದಾಮಿ | 142 |
| 21 | ಗೋಕಾಕ್ | ಗೋಕಾಕ್ | 112 | 46 | ಬೆಂಗಳೂರು | ನೆಲಮಂಗಲ | 32 |
| 22 | | ರಾಮದುರ್ಗ | 175 | 47 | | ದೇವನಹಳ್ಳಿ | 61 |
| 23 | ಕೊಡಗು | ಮಡಿಕೇರಿ | 50 | 48 | | ದೊಡ್ಡಬಳ್ಳಾಪುರ | 44 |
| 24 | | ಸೋಮವಾರಪೇಟೆ | 134 | 49 | | ಆನೇಕಲ್ | 34 |
| 25 | | ವಿರಾಜಪೇಟೆ | 143 | 50 | | ಹೊಸಕೋಟೆ | 81 |
| ಒಟ್ಟು | | | | ಒಟ್ಟು | | | |

## 2.3 ಸಂಯೋಜಕರ ಸಭೆ ಮತ್ತು ತರಬೇತಿಗಳು:

ವಿಪತ್ತು ನಿರ್ವಹಣೆ ಕಾರ್ಯಕ್ರಮದ ಸಮರ್ಪಕ ಅನುಷ್ಠಾನಕ್ಕಾಗಿ ಸೇವಾ ಮನೋಭಾವನೆ, ನಾಯಕತ್ವ ಗುಣ ಹೊಂದಿರುವ, ಸಂಘಟನಾತ್ಮಕವಾಗಿ ಕೆಲಸ ಮಾಡಲು ಆಸಕ್ತಿ ಇರುವ ಸದಸ್ಯರನ್ನು "ಶೌರ್ಯ" ವಿಪತ್ತು ನಿರ್ವಹಣಾ ಘಟಕದ ಸಂಯೋಜಕರನ್ನಾಗಿ ಆಯ್ಕೆ ಮಾಡಲಾಗುತ್ತಿದೆ. ಮುಖ್ಯವಾಗಿ ಯೋಜನೆಯ ಸೇವಾಪ್ರತಿನಿಧಿಗಳು, ತರಬೇತಿ ಸಹಾಯಕರು, ಸಂಪನ್ಮೂಲ ವ್ಯಕ್ತಿಗಳು, ನವಜೀವನ ಸದಸ್ಯರು., ಮುಂತಾದವರು ಇದ್ದಾರೆ. ತಾಲೂಕು ಸಮಿತಿ ರಚಿಸುವ ಮೊದಲು ಸಂಯೋಜಕರ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ಇದುವರೆಗೆ ಒಟ್ಟು 285 ಸಂಯೋಜಕರ ಸಮಾಲೋಚನೆ ಸಭೆಗಳನ್ನು ನಡೆಸಲಾಗಿದೆ. ಘಟಕಗಳು ಚಟುವಟಿಕೆಗಳಲ್ಲಿ ಹಿಂದೆ ಬಿದ್ದಾಗ ಸಂಯೋಜಕರನ್ನು ಒಟ್ಟು ಸೇರಿಸಿ ಚರ್ಚಿಸಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು 357 ಸಂಯೋಜಕರು ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಸಂದರ್ಭಕ್ಕನುಗುಣವಾಗಿ ಅವರ ಬೇಡಿಕೆಯಂತೆಯೇ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಇದುವರೆಗೆ ಒಟ್ಟು 50 ಕೌಶಲ್ಯಾಧಾರಿತ ತರಬೇತಿಗಳನ್ನು ನಡೆಸಲಾಗಿದೆ. ಸಂಯೋಜಕರ ರಾಜ್ಯಮಟ್ಟದ 2 ವಾಟ್ಸಾಪ್ ಗುಂಪುಗಳನ್ನು ಮಾಡಲಾಗಿದ್ದು, ಸಂಯೋಜಕರು ಮುಕ್ತವಾಗಿ ಅವರ ಅಭಿಪ್ರಾಯ, ಸಂಶಯಗಳನ್ನು ಈ ತಂಡದಲ್ಲಿ ವಿಚಾರ ವಿನಿಮಯ ಮಾಡಿಕೊಂಡು ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಘಟಕವಾರು ಸಭೆ ನಡೆಸುವ ಕುರಿತು, ಶ್ರಮದಾನ ಹಾಗೂ ಸೇವೆಯ ಚಟುವಟಿಕೆಗಳ ಕುರಿತು, ಸುತ್ತೋಲೆಗಳ ಮಾಹಿತಿಗಳ ಕುರಿತು ಈ ಗುಂಪಿನಲ್ಲಿ ಸಂಯೋಜಕರಿಗೆ ತಿಳುವಳಿಕೆ ನೀಡಲಾಗುತ್ತಿದೆ. ಅಲ್ಲದೆ ಮಳೆಗಾಲ ಸಂದರ್ಭದಲ್ಲಿ ಮಾಡಬೇಕಾದ ಕೆಲಸ ಕಾರ್ಯಗಳು, ಘಟಕದ ಮಾಸಿಕ ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳನ್ನೂ ಅವರ ಅಪೇಕ್ಷೆಯಂತೆ ಗುಂಪಿನಲ್ಲಿ ಚರ್ಚಿಸಲಾಗುತ್ತಿದೆ.




## 2.4 ಸಮಾಲೋಚನೆ ಸಭೆಗಳು:

ವಿಪತ್ತು ನಿರ್ವಹಣೆಯ ತಾಲ್ಲೂಕು ಘಟಕಕ್ಕೆ ವಿಪತ್ತು ನಿರ್ವಹಣೆಯ ಬಗ್ಗೆ ಕೌಶಲ್ಯ ಹೊಂದಿರುವ ಸ್ವಯಂಸೇವಕರ ಆಯ್ಕೆ ಮಾಡುವ ಕುರಿತಂತೆ ಸಮಾಲೋಚನೆ ಸಭೆಗಳನ್ನು ಆಯೋಜನೆ ಮಾಡಲಾಗಿರುತ್ತದೆ. 21 ರಿಂದ 45 ವರ್ಷ ವಯಸ್ಸಿನ, ಸಾಮಾಜಿಕ ಕಳಕಳಿ ಹೊಂದಿರುವವರನ್ನು ಗುರುತಿಸಿ ಸಭೆಗೆ ಆಹ್ವಾನಿಸಿದ್ದು ಇವರಿಗೆ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಆಶಯಗಳ ಬಗ್ಗೆ ಮಾಹಿತಿ ನೀಡಲಾಗಿದೆ. ಸ್ವಯಂಪ್ರೇರಣೆಯಿಂದ ಸೇರ್ಪಡೆಗೊಳ್ಳಲು ಇಚ್ಛಿಸಿದವರನ್ನು ವಿಪತ್ತು ನಿರ್ವಹಣಾ ಘಟಕಕ್ಕೆ ಆಯ್ಕೆ ಮಾಡಲಾಗಿದೆ. ಈಜು ತಜ್ಞರು, ಉರಗ ಪ್ರೇಮಿಗಳು, ಮರ ಏರುವ ತಜ್ಞರು, ಇಲೆಕ್ಟ್ರಿಶಿಯನ್, ಗಾರೆ ಕೆಲಸದವರು, ವಾಹನ ಚಾಲಕರು, ಕೃಷಿಕರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಜ್ಞತೆ ಹೊಂದಿರುವವ[illegible]ನ್ನು ಸ್ವಯಂಸೇವಕರನ್ನಾಗಿ ಗುರುತಿಸಲಾಗಿದೆ. ರಾಜ್ಯದಲ್ಲಿ ಇದುವರೆಗೆ 601 ಸಮಾಲೋಚನೆ ಸಭೆಗಳನ್ನು ನಡೆಸಲಾಗಿದೆ. ಹತ್ತು ಸಾವಿರಕ್ಕೂ [illegible]ಕ ಮಂದಿ ಸಮಾಲೋಚನೆ ಸಭೆಯಲ್ಲಿ ಭಾಗವಹಿಸಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆದುಕೊಂಡಿರುತ್ತಾರೆ.

## 2.5 ಸ್ವಯಂಸೇವಕರ ತರಬೇತಿ:

ವಿಪತ್ತು ನಿರ್ವಹಣೆಯ ತಾಲ್ಲೂಕು ಸಮಿತಿಗೆ ನೋಂದಾವಣಿ ಮಾಡಿಕೊಂಡ ಸ್ವಯಂಸೇವಕರಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣೆ [illegible] (ಎನ್.ಡಿ.ಆರ್.ಎಫ್), ಅಗ್ನಿಶಾಮಕದಳದಿಂದ ಪ್ರಾಯೋಗಿಕ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆ, ರಾಜ್ಯ ವಿಪ[illegible] ನಿರ್ವಹಣಾ ಪಡೆ, ಗೃಹರಕ್ಷಕದಳ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಕೃಷಿ, ಪಶುಸಂಗೋಪನೆ, ಮೀನುಗಾರಿಕೆ ಮುಂತಾ[illegible] ಇಲಾಖೆಗಳ ಸಹಯೋಗದಲ್ಲಿ ತರಬೇತಿ ನಡೆಸಲಾಗುವುದು. ತರಬೇತಿಯು ಒಂದು ದಿನ ಅವಧಿಯದ್ದಾಗಿದ್ದು ವಿಷಯಾಧಾರಿತವಾಗಿರುತ್ತ[illegible] ತರಬೇತಿಯಲ್ಲಿ ಪ್ರಾತ್ಯಕ್ಷಿಕೆ (Mock Drill Exercise) ಮೂಲಕ ಕಲಿಯಲು ಅವಕಾಶ ನೀಡಿದ್ದು ಯಾವುದೇ ಬಗೆಯ ವಿಪತ್ತು ಸಂಭವಿಸಿದರು ಕಾರ್ಯಾಚರಣೆ ನಡೆಸಬಲ್ಲ ತಜ್ಞತೆಯನ್ನು ರೂಢಿಸಿಕೊಳ್ಳಲು ಅನುಕೂಲವಾಗಿರುತ್ತದೆ. ವರದಿ ವರ್ಷದಲ್ಲಿ 32 ತರಬೇತಿ ಆಯೋಜನ[illegible] ಮಾಡಲಾಗಿರುತ್ತದೆ.





## 2.6 ವಿಪತ್ತು ನಿರ್ವಹಣೆಗೆ ಅಗತ್ಯ ಪರಿಕರಗಳನ್ನು ಘಟಕಕ್ಕೆ ವಿತರಣೆ:

ವಿಪತ್ತು ನಿರ್ವಹಣಾ ಕಾರ್ಯಾಚರಣೆಗೆ ಅಗತ್ಯವಿರುವ ಪರಿಕರಗಳನ್ನು ಇದುವರೆಗೆ 27 ತಾಲ್ಲೂಕು ಸಮಿತಿಗಳಿಗೆ ನೀಡಲಾಗಿದೆ. ಲೈಫ್ ಜಾಕೆಟ್, ಲೈಫ್ ಬಾಯ್, ಲ್ಯಾಡರ್, ಸ್ಟ್ರೆಚರ್, ಫೈರ್ ಎಕ್ಸಟಿಂಗ್ವಿಶರ್, ಸೇಫ್ಟಿ ಹೆಲ್ಮೆಟ್, ಚೈನ್ ಸಾ, ಫಸ್ಟ್ ಆಡ್ ಕಿಟ್ ಸೇರಿದಂತೆ ಸಾಮಾನ್ಯ 20 ಬಗೆಯ ತುರ್ತು ಸ್ಪಂದನೆಗೆ ಅಗತ್ಯ ಉಪಕರಣಗಳನ್ನು ನೀಡಲಾಗಿದೆ. ಪ್ರವಾಹ, ಭೂಕಂಪ, ಚಂಡಮಾರುತ ಮತ್ತಿತರ ವಿಪತ್ತಿನ ಸಂದರ್ಭಗಳಲ್ಲಿ ಹಾಗೂ ಸಾಮಾಜಿಕ ಸೇವಾ ಚಟುವಟಿಕೆಗಳ ಸಮಯದಲ್ಲಿ ಈ ಉಪಕರಣಗಳನ್ನು ಸ್ವಯಂಸೇವಕರು ಬಳಸಿಕೊಳ್ಳುತ್ತಿದ್ದಾರೆ. ಉಪಕರಣಗಳನ್ನು ತಾಲ್ಲೂಕು ವ್ಯಾಪ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರ ಅಥವಾ ಕಾರ್ಯಾಚರಣೆಗೆ ಸೂಕ್ತವಾಗಿರುವ ಯೋಜನಾಧಿಕಾರಿಗಳು ಸೂಚಿಸಿದ ಸ್ಥಳಗಳಲ್ಲಿ ಸಂಗ್ರಹಿಸಿ ಇಡಲಾಗಿದ್ದು ಸ್ವಯಂಸೇವಕರಿಗೆ ಕ್ಲಪ್ತ ಸಮಯಕ್ಕೆ ಸಿಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ವಿತರಣೆ ಹಾಗೂ ಹಿಂಪಡೆದುಕೊಳ್ಳುವ ಕುರಿತು ಸೂಕ್ತ ದಾಖಲಾತಿ ಇಟ್ಟುಕೊಳ್ಳಲಾಗುತ್ತಿದೆ. ಈ ಪ್ರಯುಕ್ತ ವಿಪತ್ತು ನಿರ್ವಹಣಾ ವಿಭಾಗದ ಮೂಲಕ ಮಾನ್ಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು 209/EDOO/2020-21 ಸುತ್ತೋಲೆಯನ್ನು ನೀಡಿರುತ್ತಾರೆ. ಪರಿಕರ ವಿತರಣೆಯ ಹಾಗೂ ವಿನಿಯೋಗಿಸಿದ ಮೊತ್ತದ ವಿವರ ಈ ಕೆಳಗಿನಂತಿದೆ.

**2.7 ತುರ್ತು ಕ್ಷಿಪ್ರ ತಂಡ ರಚನೆ:** ತಾಲೂಕು ಘಟಕಗಳಲ್ಲಿ ವಿಶೇಷ ಕೌಶಲ್ಯ ಹೊಂದಿರುವ ನುರಿತ ಸ್ವಯಂಸೇವಕರನ್ನು ಗುರುತಿಸಿ 7 ಕ್ಷಿಪ್ರ ತಂಡಗಳನ್ನು ರಚಿಸಲಾಗಿದೆ. ಇವರು ರಾಜ್ಯದಲ್ಲಿ, ಜಿಲ್ಲೆಯಲ್ಲಿ, ತಾಲೂಕಿನಲ್ಲಿ ಮತ್ತು ಸ್ಥಳೀಯವಾಗಿಯೂ ಯಾವ ಸಂದರ್ಭದಲ್ಲಿಯೂ ಸಜ್ಜಾಗಿ ನಿಲ್ಲುವಂತೆ ತರಬೇತುಗೊಳಿಸಲಾಗಿದೆ. ಮುಖ್ಯವಾಗಿ ಅಪಘಾತ, ಅನಾರೋಗ್ಯ, ಬೆಂಕಿ, ಕಾಡ್ಗಿಚ್ಚು ಅನಾಹುತ, ಪ್ರವಾಹ, ಅತಿವೃಷ್ಟಿ, ಕಟ್ಟಡ ಕುಸಿತ, ಭೂ ಕುಸಿತ., ಮುಂತಾದ ಸಂದರ್ಭದಲ್ಲಿ ತಕ್ಷಣ ಸ್ಪಂದಿಸುವಂತೆ ಇವರಿಗೆ ನಿರ್ದೇಶನ ನೀಡಲಾಗಿದೆ.






ಇವರನ್ನು ಸ್ಥಳೀಯ ಪೋಲೀಸ್, ಅಗ್ನಿಶಾಮಕ ಇಲಾಖೆಯೊಂದಿಗೂ ಸಂಪರ್ಕ ಸಾಧಿಸುವಂತೆ ವ್ಯವಸ್ಥೆ ಮಾಡಲಾಗಿದೆ. ತಂಡಗಳ ವಿವರ ಈ ಕೆಳಗಿನಂತಿದೆ.

| ಕ್ರಸಂ. | ಜಿಲ್ಲೆ | ತಾಲೂಕು | ಸದಸ್ಯರು |
|---|---|---|---|
| 1 | ದ.ಕ.1 | ಬೆಳ್ತಂಗಡಿ | 18 |
| 2 | ಉ.ಕ. | ಕುಮಟಾ | 20 |
| 3 | ದ.ಕ. 2 | ಕಡಬ | 15 |
| 4 | ಚಿಕ್ಕಮಗಳೂರು | ಕಳಸ | 30 |
| 5 | ಚಿಕ್ಕಮಗಳೂರು | ಮೂಡಿಗೆರೆ-ಬಣಕಲ್ | 32 |
| 6 | ಉ.ಕ. | ಅಂಕೋಲ | 08 |
| 7 | ಕೊಡಗು | ಮಡಿಕೇರಿ | 12 |

## 2.22 ವಿಪತ್ತು ಸೇವಾ ಚಟುವಟಿಕೆಗಳು:

"ಶೌರ್ಯ" ವಿಪತ್ತು ನಿರ್ವಹಣಾ ಘಟಕಗಳನ್ನು ಬಲಪಡಿಸುವ ಕಾರ್ಯ ಪ್ರಸ್ತುತ ಚಾಲ್ತಿಯಲ್ಲಿದೆ. ತಂಡದ ಸದಸ್ಯರ ಕಾರ್ಯಚಟುವಟಿಕೆಯನ್ನು ಗಮನಿಸಿದ ಇತರರು ಘಟಕಗಳಿಗೆ ಸೇರ್ಪಡೆಯಾಗಲು ಬಯಸುತ್ತಿದ್ದಾರೆ. ಸ್ಥಳೀಯವಾಗಿ ಸ್ವಯಂಪ್ರೇರಣೆಯಿಂದ ವಿಪತ್ತು ಸೇವೆಯನ್ನು ಮಾಡುತ್ತಿರುವ ಸಮಾಜ ಸೇವಕರನ್ನೂ ನಮ್ಮ ತಂಡಕ್ಕೆ ಪರಿಚಯಿಸಲಾಗುತ್ತಿದೆ. ಯಾವುದೇ ವಿಪತ್ತು ಘಟಿಸಿದ ಸಂದರ್ಭದಲ್ಲಿ "ಶೌರ್ಯ" ತಂಡ ಧಾವಿಸುತ್ತಿರುವುದನ್ನು ಗಮನಿಸಿದ ಜಿಲ್ಲಾಡಳಿತ, ತಾಲೂಕು ಆಡಳಿತ, ಪೋಲಿಸು ಇಲಾಖೆ, ಅಗ್ನಿಶಾಮಕ ದಳದವರು ಸ್ವಯಂಸೇವಕರ ಸಹಕಾರವನ್ನೂ ಯಾಚಿಸುತ್ತಿದ್ದಾರೆ. ಸದಾ ಚಟುವಟಿಕೆಗಳಲ್ಲಿ ನಿರತರಾಗಿರುವ "ಶೌರ್ಯ" ತಂಡದವರು ತಮ್ಮ ಕಣ್ಣಿಗೆ ಕಾಣುವ, ಕಿವಿಗೆ ಕೇಳುವ, ಬಂದಿರುವ ಮಾಹಿತಿಯನ್ನು ಆಧರಿಸಿ ವಿಪತ್ತು ಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.







ನಿರ್ವಹಿಸಿದ ವಿಪತ್ತು ಸೇವಾ ಚಟುವಟಿಕೆಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ನಿರ್ವಹಿಸಿದ ವಿಪತ್ತು ಸೇವಾ ಚಟುವಟಿಕೆಗಳು | ಪ್ರಸ್ತುತ | ಇದುವರೆಗೆ ಒಟ್ಟು |
|---|---|---|---|
| 1 | ಪ್ರವಾಹ ಕಾರ್ಯಾಚರಣೆ | 63 | 94 |
| 2 | ಬೆಂಕಿ ಅವಘಡ ನಿರ್ವಹಣೆ | 57 | 346 |
| 3 | ಗುಡ್ಡ ಕುಸಿತ ಕಾರ್ಯಾಚರಣೆ | 13 | 27 |
| 4 | ಗ್ಯಾಸ್ ಸಿಲಿಂಡರ್ ಸ್ಫೋಟ ಕಾರ್ಯಾಚರಣೆ | 3 | 7 |
| 5 | ರಸ್ತೆ ಅಪಘಾತಕ್ಕೆ ಸ್ಪಂದನೆ | 1368 | 3137 |
| | ಅಪಘಾತಕ್ಕೀಡಾದ ಪ್ರಾಣಿಗಳಿಗೆ ಸ್ಪಂದನೆ | 20 | 54 |
| 6 | ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವುದು | 2 | 8 |
| 7 | ಅಗ್ನಿಶಾಮಕ ಅಧಿಕಾರಿಗಳೊಂದಿಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವುದು | 48 | 184 |
| 8 | ಪೋಲೀಸ್ ಅಧಿಕಾರಿಗಳೊಂದಿಗೆ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿರುವುದು. | 24 | 143 |
| 9 | ರಕ್ತದಾನ | 1183 | 2487 |
| 10 | ತೀವ್ರ ಮಳೆಯಿಂದ ಕುಸಿತವಾದ ಮನೆಗೆ ಅಗತ್ಯ ಸ್ವಚ್ಛತಾ ಕಾರ್ಯದಲ್ಲಿ ಸಹಕಾರ ನೀಡಿರುವುದು | 47 | 1218 |
| 11 | ಬಾವಿ, ಕೆರೆ, ನದಿಯಲ್ಲಿ ಮರಣಹೊಂದಿದ ವ್ಯಕ್ತಿ, ಪ್ರಾಣಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆ | 16 | 43 |
| 12 | ಕಿಂಡಿ ಆಣೆಕಟ್ಟು ಸ್ವಚ್ಛತೆ | 43 | 318 |

| | | | |
|---|---|---|---|
| 13 | ರಸ್ತೆಯಲ್ಲಿ ಬಿದ್ದಿರುವ ಮರಗಳನ್ನು ತೆರವುಗೊಳಿಸಿರುವುದು | 217 | 2147 |
| 14 | ವಿದ್ಯುತ್ ತಂತಿಯ ಮೇಲೆ ಬಿದ್ದ ಮರ ತೆರವು | 138 | 243 |
| 15 | ಕಾಡು ಪ್ರಾಣಿಗಳ ಹಾವಳಿ ತಡೆಯುವ ಕುರಿತು ಚಟುವಟಿಕೆ | 16 | 82 |
| 16 | ಪ್ರಥಮ ಚಿಕಿತ್ಸೆ ನೀಡಿರುವುದು | 187 | 347 |
| 17 | ಬಡ ಕುಟುಂಬಕ್ಕೆ ಮನೆ ರಚನೆ/ರಿಪೇರಿ ಶ್ರಮದಾನ | - | - |
| 18 | ಸಾರ್ವಜನಿಕ ಕಟ್ಟಡ ರಚನೆಗೆ ಶ್ರಮದಾನ | - | - |
| 19 | ರಸ್ತೆ ರಿಪೇರಿ ಮತ್ತು ರಚನೆ ಶ್ರಮದಾನ | | |
| 20 | ಮರಣ ಹೊಂದಿದ ಪ್ರಾಣಿಗಳನ್ನು ತೆರವುಗೊಳಿಸಿ ದಫನ ಮಾಡಿರುವುದು | - | - |
| 21 | ಕುಡಿಯುವ ನೀರಿನ ಬಾವಿ ಸ್ವಚ್ಚತೆ | - | - |
| 22 | ಬಡ ಕುಟುಂಬಕ್ಕೆ ಶೌಚಾಲಯ ರಚನೆ/ರಿಪೇರಿ | 4 | 4 |
| 23 | ಹಾವು ಹಿಡಿದು ಕಾಡಿಗೆ ಬಿಟ್ಟಿರುವುದು | 1443 | 3784 |
| 24 | ಅನಾರೋಗ್ಯ ಪೀಡಿತರಿಗೆ ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯಲು ಸಹಕರಿಸುವುದು | 83 | 367 |
| 25 | ಹಾವು ಹಿಡಿದು 25ನಿರ್ಗತಿಕರ/ಅನಾಥರ ಶವ ಸಂಸ್ಕಾರದಲ್ಲಿ ಪಾಲ್ಗೊಂಡಿರುವುದು | 46 | 238 |
| 26 | ನಾಪತ್ತೆಯಾದ ವ್ಯಕ್ತಿಗಳ ಶೋಧನೆ | - | - |
| 27 | ಕಾಲುವೆ ದುರಸ್ಥಿ | - | - |

## 2.22 ಸಾಮಾಜಿಕ ಸೇವಾ ಕಾರ್ಯಗಳು:

ವಿಕೋಪ ಸಂಭವಿಸದ ಸಾಮಾನ್ಯ ದಿನಗಳಲ್ಲಿ ವಿಪತ್ತು ನಿರ್ವಹಣಾ ತಾಲೂಕು ಸಮಿತಿಯ ಸ್ವಯಂಸೇವಕರು ಸಾಮಾಜಿಕ ಕಳಕಳಿಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಪ್ರೇರಣೆ ನೀಡಲಾಗುತ್ತಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳಾದ ಪರಿಸರ ರಕ್ಷಣೆ, ಸ್ವಚ್ಛ ಭಾರತ್ ಕಾರ್ಯಕ್ರಮ, ಶ್ರದ್ಧಾ ಕೇಂದ್ರಗಳ ಸ್ವಚ್ಛತೆ, ದುಶ್ಚಟಗಳ ವಿರುದ್ಧ ಜಾಗೃತಿ, ಶೌಚಾಲಯದ ಮಹತ್ವದ ಬಗ್ಗೆ ಅರಿವು ಮೂಡಿಸುವುದು, ಆರೋಗ್ಯ ಕಾರ್ಯಕ್ರಮ, ಧಾರ್ಮಿಕ ಕಾರ್ಯಕ್ರಮ, ನಾಗರಿಕ ಪ್ರಜ್ಞೆ, ಭೂಮಿ ತಾಯಿಯನ್ನು ರಕ್ಷಿಸಿ ಮುಂದಿನ ಪೀಳಿಗೆಗೆ ವರ್ಗಾಯಿಸಿ ಮುಂತಾದ ಕಾರ್ಯಕ್ರಮಗಳಲ್ಲಿ ಸ್ವಯಂಸೇವಕರಿಗೆ ತೊಡಗಿಕೊಳ್ಳಲು ಪ್ರೇರಣೆ ನೀಡಲಾಗುತ್ತಿದೆ.



ಸ್ವಚ್ಛತಾ ಕಾರ್ಯಕ್ರಮ





ಮನೆ ರಚನೆ



ರಕ್ತದಾನ

ನಡೆಸಲಾದ ಚಟುವಟಿಕೆಗಳ ವಿವರ

| ಕ್ರ.ಸಂ. | ನಿರ್ವಹಿಸಿದ ಸಾಮಾಜಿಕ ಸೇವಾ ಕಾರ್ಯಗಳು | ವರದಿ ವರ್ಷ | ಇದುವರೆಗೆ ಒಟ್ಟು |
|---|---|---|---|
| 1 | ವಿವಿಧ ರೀತಿಯ ಸ್ವಚ್ಛತಾ ಕಾರ್ಯಗಳು | 486 | 4486 |
| 2 | ತೊಂದರೆಯಲ್ಲಿರುವ ಜಾನುವಾರುಗಳಿಗೆ ಚಿಕಿತ್ಸೆ | 39 | 339 |
| 3 | ರಸ್ತೆ ಬದಿಯಲ್ಲಿನ ಪೊದೆ, ಮುಳ್ಳು ಕಂಟಿಗಳನ್ನು ತೆರವುಗೊಳಿಸುವುದು | 42 | 542 |
| 4 | ಗಿಡ ನಾಟಿ ಕಾರ್ಯಕ್ರಮಗಳು | 1217 | 2318 |
| 5 | ಜಾನುವಾರುಗಳಿಗೆ ಕುಡಿಯುವ ನೀರು/ಮೇವು ವ್ಯವಸ್ಥೆ | 16 | 816 |
| 6 | ರಕ್ತದಾನ ಶಿಬಿರ ಏರ್ಪಡಿಸುವುದು | 18 | 36 |
| 7 | ಕೋವಿಡ್ ಲಸಿಕೆಗಳನ್ನು ಪಡೆಯಲು ಸಹಾಯ ಮಾಡಿರುವುದು | 23 | 649 |
| 8 | ಘಟಕದ ಸ್ವಯಂಸೇವಕರು ತೊಂದರೆಯಲ್ಲಿದ್ದಾಗ ಸಹಾಯ ಮಾಡಿರುವುದು | 16 | 246 |
| 9 | ಬರಗಾಲದಲ್ಲಿ ಕುಡಿಯುವ ನೀರು ಒದಗಣೆ | 18 | 18 |
| 10 | ನಿರಾಶ್ರಿತರ ಕೇಂದ್ರಗಳಿಗೆ/ಸಂತ್ರಸ್ಥರ ಕೇಂದ್ರ ಭೇಟಿ ಮಾಡಿ ಸಾಂತ್ವಾನ ಹೇಳುವುದು ಮತ್ತು ಅಗತ್ಯ ಸೇವಾ ಕಾರ್ಯದಲ್ಲಿ ತೊಡಗಿಕೊಳ್ಳುವುದು | 24 | 387 |
| 11 | ಗ್ರಾಮ ಸಭೆಯಲ್ಲಿ ಪಾಲ್ಗೊಂಡು ವಿಪತ್ತು ನಿರ್ವಹಣೆಯ ಕುರಿತು ಮಾಹಿತಿ ನೀಡುವುದು | 32 | 94 |
| 12 | ವಿವಿಧ ಇಲಾಖೆಗಳ ಸೌಹಾರ್ದ ಸಭೆ ಅಥವಾ ಇತರೇ ಸಭೆಗಳಲ್ಲಿ ಭಾಗಿಯಾಗಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುವುದು | 13 | 61 |
| 13 | ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಯಿಸಿ ಇಲಾಖಾ ಸೌಲಭ್ಯಗಳ ಬಗ್ಗೆ ಮಾಹಿತಿ ಕೊಡಿಸುವುದು | 8 | 19 |
| 14 | ಗ್ರಾಮದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಸನ್ಮಾನಿಸುವುದು. | 16 | 23 |
| 15 | ಇಲಾಖೆಗಳಿಂದ ಸೌಲಭ್ಯಗಳನ್ನು ಕೊಡಿಸಲು ನೆರವಾಗಿರುವುದು | 47 | 247 |
| 16 | ಜನಪ್ರತಿನಿಧಿಗಳನ್ನು ಹಾಗೂ ಸರ್ಕಾರಿ ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಯಿಸಿ ಸಮಸ್ಯೆಯ ಬಗ್ಗೆ ಗಮನ ಸೆಳೆಯುವುದು | 12 | 23 |
| 17 | ಮದ್ಯಪಾನಿಯನ್ನು ಮದ್ಯವರ್ಜನ ಶಿಭಿರಕ್ಕೆ ಸೇರಿಸುವುದು | 6 | 17 |
| 18 | ಶಾಲೆ ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕರಿಗೆ ಅಗ್ನಿಶಾಮಕ ದಳದಿಂದ ವಿಪತ್ತು ನಿರ್ವಹಣೆ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ಏರ್ಪಡಿಸುವುದು | 3 | 16 |
| 19 | ತುರ್ತು ಸಹಾಯವಾಣಿಗೆ ಕರೆ ಮಾಡಿ ತೊಂದರೆಯಲ್ಲಿರುವವರಿಗೆ ಸ್ಪಂದನೆ. | 124 | 1837 |
| 20 | ಸಾರ್ವಜನಿಕ ನಲ್ಲಿ ನೀರು ಸೋರದಂತೆ ತಡೆಯುವುದು | 34 | 434 |
| 21 | ಇಲಾಖೆಗಳ ಭೇಟಿ | - | - |
| 22 | ವಿಶೇಷ ದಿನಾಚರಣೆಗಳ ಆಚರಣೆ | - | - |
| 23 | ಸಮಸ್ಯೆಯಲ್ಲಿರುವ ರೈತರಿಗೆ ಸ್ಪಂದಿಸುವುದು | - | - |
| 24 | ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ವಿಪತ್ತು ನಿರ್ವಹಣೆ ಘಟಕದ ಪ್ರತಿನಿಧಿಯಾಗಿ ಭಾಗವಹಿಸುವಿಕೆ | - | - |
| 25 | ದಾನಿಗಳ ಸಹಕಾರ ಪಡೆದು ಸಂತ್ರಸ್ಥರಿಗೆ ಆಹಾರ ಧಾನ್ಯ ಮತ್ತಿತರ ಕಿಟ್‌ಗಳ ವಿತರಣೆ | 31 | 2443 |
| 26 | ಯೋಜನೆಯಿಂದ ಮಾಶಾಸನ ನೀಡುತ್ತಿರುವ ಕುಟುಂಬ ಭೇಟಿ, ವೃದ್ಧರು ಅನಾರೋಗ್ಯದಿಂದ ಬಳಲುತ್ತಿರುವವರ ಮನೆ ಭೇಟಿ ಮತ್ತು ಸಾಂತ್ವಾನ ಹೇಳುವುದು | 189 | 218 |

## 2.22 ಸಮವಸ್ತ್ರ ಮತ್ತು ಪ್ರಮಾಣಪತ್ರ ವಿತರಣೆ:

ಎನ್.ಡಿ.ಆರ್.ಎಫ್ ಮೂಲಕ ತರಬೇತಿಯನ್ನು ಪೂರೈಸಿದ ವಿಪತ್ತು ಸೇವಾ ಸಮಿತಿಯ ಸ್ವಯಂಸೇವಕರಿಗೆ ಪ್ರಮಾಣಪತ್ರವನ್ನು ನೀಡಲಾಗಿದೆ. ಅಲ್ಲದೇ ಎಲ್ಲಾ ಸ್ವಯಂಸೇವಕರಿಗೆ ಸಮವಸ್ತ್ರವನ್ನು ವಿತರಣೆ ಮಾಡಲಾಗಿದೆ. ಸಮವಸ್ತ್ರವಾಗಿ ತಲಾ ಒಂದು ಟೀ ಶರ್ಟ್ ಹಾಗೂ ಒಂದು ಪ್ಯಾಂಟ್ ನೀಡಲಾಗಿದೆ. ಒಂದು ವರ್ಷ ಪೂರೈಸಿದ ಸಮಿತಿಗಳ ಸ್ವಯಂಸೇವಕರಿಗೆ ತಲಾ ಎರಡು ಸಮವಸ್ತ್ರ ನೀಡಲಾಗಿದೆ. ಸಮವಸ್ತ್ರವನ್ನು ಧರಿಸಿದ ಸ್ವಯಂಸೇವಕರು ವಿಪತ್ತು ಸೇವೆ ಹಾಗೂ ಸಾಮಾಜಿಕ ಸೇವೆ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ.



| ಕ್ರ.ಸಂ. | ತಾಲೂಕು | ಸಮವಸ್ತ್ರ ವಿತರಣೆ | | | ಕ್ರ.ಸಂ. | ತಾಲೂಕು | ಸಮವಸ್ತ್ರ ವಿತರಣೆ | | |
|---|---|---|---|---|---|---|---|---|---|
| | | ಟೀಶರ್ಟ್ | ಪ್ಯಾಂಟ್ | ಕ್ಯಾಪ್ | | | ಟೀಶರ್ಟ್ | ಪ್ಯಾಂಟ್ | ಕ್ಯಾಪ್ |
| 1 | ಬೆಳ್ತಂಗಡಿ | **52** | – | - | 36 | ಕುಮಟಾ | **75** | - | - |
| 2 | ಗುರುವಾಯನಕೆರೆ | **56** | - | - | 37 | ಮೂಡಿಗೆರೆ | **200** | - | - |
| 3 | ನವಲಗುಂದ | **69** | - | - | 38 | ಸುಳ್ಯ | **125** | - | - |
| 4 | ಧಾರವಾಡ | **70** | - | - | 39 | ಬೆಳ್ತಂಗಡಿ | **1** | - | - |
| 5 | ಗುರುವಾಯನಕೆರೆ | **29** | - | - | 40 | ಕಾರವಾರ | **30** | - | - |
| 6 | ಗುರುವಾಯನಕೆರೆ | **9** | - | - | 41 | ಚಿಕ್ಕಮಗಳೂರು | **13** | - | - |
| 7 | ಬೆಳ್ತಂಗಡಿ | **18** | - | - | 42 | ಸಕಲೇಶಪುರ | **15** | - | - |
| 8 | ನಿಪ್ಪಾಣಿ | **46** | - | - | 43 | ಕೊಪ್ಪ | **48** | - | - |
| 9 | ಚಿಕ್ಕೋಡಿ | **105** | - | - | 44 | ಶೃಂಗೇರಿ | **34** | - | - |
| 10 | ಅಥಣಿ | **112** | - | - | 45 | ಹೊನ್ನಾವರ | **52** | - | - |
| 11 | ಗೋಕಾಕ್ | **114** | - | - | 46 | ಸೋಮವಾರಪೇಟೆ | **8** | - | - |
| 12 | ಕಾರವಾರ–ಅಂಕೋಲಾ | **79** | - | - | 47 | ಭಟ್ಕಳ | **35** | - | - |
| 13 | ಕುಮಟಾ 111 | **111** | - | - | 48 | ಹಳಿಯಾಳ | **3** | - | - |
| 14 | ಹೊನ್ನಾವರ–ಭಟ್ಕಳ | **132** | - | - | 49 | ವಿರಾಜಪೇಟೆ | **28** | - | - |
| 15 | ಸುಳ್ಯ | **122** | 140 | - | 50 | ಉಡುಪಿ | **168** | - | - |
| 16 | ವಿರಾಜಪೇಟೆ | **93** | - | - | 51 | ಕುಂದಾಪುರ | **115** | - | - |
| 17 | ಸೋಮವಾರಪೇಟೆ | **106** | - | - | 52 | ಸುಳ್ಯ | **40** | - | - |
| 18 | ಸಕಲೇಶಪುರ | **79** | - | - | 53 | ಬೆಂಗಳೂರು | **245** | - | - |
| 19 | ಚಿಕ್ಕಮಗಳೂರು | **82** | - | - | 54 | ಗುರುವಾಯನಕೆರೆ | **12** | - | - |
| 20 | ಮೂಡಿಗೆರೆ | **100** | - | - | 55 | ಜಾಗೃತಿ ಸೌಧ | **19** | - | - |
| 21 | ಕೊಪ್ಪ | **112** | - | - | 56 | ಸುಳ್ಯ | **4** | - | - |
| 22 | ಬೆಳ್ತಂಗಡಿ | **10** | - | - | 57 | ಶಾಂತಿಗ್ರಾಮ | **40** | - | - |
| 23 | ಹಳಯಾಳ | **50** | - | - | 58 | ಬೇಲೂರು | **100** | - | - |
| 24 | ಗುರು/ಅಳದಂಗಡಿ | **21** | - | - | 59 | ಹಾಸನ | **100** | - | - |
| 25 | ಗುರುವಾಯನಕೆರೆ | **33** | - | - | 60 | ರಾಮದುರ್ಗ | **158** | - | - |
| 26 | ಬೆಳ್ತಂಗಡಿ/ಗು.ಕೆರೆ | **13** | - | - | 61 | ಕುಂದಗೋಳ | **135** | - | - |
| 27 | ಬೆಳ್ತಂಗಡಿ/ಗು.ಕೆರೆ | **21** | - | - | 62 | ಯಲ್ಲಾಪುರ | **110** | - | - |
| 28 | ಬೆಳ್ತಂಗಡಿ/ಗು.ಕೆರೆ | **5** | - | - | 63 | ದೊಡ್ಡಬಳ್ಳಾಪುರ | **21** | - | - |
| 29 | ಬೆಂಗಳೂರು | **25** | - | - | 64 | ಕುಂದಾಪುರ | **70** | - | - |
| 30 | ಮುಧೋಳ | **110** | - | - | 65 | ಕಡಬ | **14** | - | - |
| 31 | ಜಮಖಂಡಿ | **110** | - | - | 66 | ಬೆಳ್ತಂಗಡಿ | **87** | - | - |
| 32 | ಬಾದಾಮಿ | **130** | - | - | 67 | ಕೊಪ್ಪ | **148** | - | - |
| 33 | ಬಾಗಲಕೋಟೆ | **100** | - | - | 68 | ಶೃಂಗೇರಿ | **94** | - | - |
| 34 | ಗುರು/ತಣ್ಣೀರುಪಂತ | **8** | - | - | 69 | ಬೆಳ್ತಂಗಡಿ | **9** | - | - |
| 35 | ಗುರು/ಹೊಸಂಗಡಿ | **5** | - | - | 70 | ಬೆಳ್ತಂಗಡಿ | **21** | - | - |
| | | | | | 71 | ಮೈಸೂರು ಪ್ರಾದೇಶಿಕ | - | - | 1 |
| ಒಟ್ಟು | | | | | | | **4714** | **140** | **59** |

## 2.22 ಮಾಸಿಕ ಸಭೆಗಳು:

ವಿಪತ್ತು ನಿರ್ವಹಣಾ ಸ್ವಯಂಸೇವಕರ ಘಟಕಗಳ ಮಾಸಿಕ ಸಭೆಗಳು ಹಾಗೂ ಸಮಿತಿಗಳ ತ್ರೈ ಮಾಸಿಕ ಸಭೆಗಳನ್ನು ನಡೆಸಲಾಗುತ್ತಿದೆ. ಮಾಸಿಕ ಸಭೆಗಳ ಸಂದರ್ಭದಲ್ಲಿ ಸ್ವಯಂಸೇವಕರು ಸ್ಥಳೀಯವಾಗಿ ಅರ್ಧ ದಿನದ ಶ್ರಮದಾನ ನಡೆಸುತ್ತಿದ್ದಾರೆ. ಶಾಲಾ ಕೈತೋಟ ರಚನೆ, ರಸ್ತೆ ರಿಪೇರಿ, ಬಡ ಕುಟುಂಬಗಳ ಮನೆ ರಿಪೇರಿ, ಗಿಡ ನಾಟಿ, ಬೀಚ್ ಸ್ವಚ್ಛತೆ ಮುಂತಾದ ಕೆಲಸಗಳನ್ನು ಶ್ರಮದಾನಕ್ಕೆಂದು ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ತ್ರೈ ಮಾಸಿಕ ಸಭೆಗಳಲ್ಲಿ ಪೊಲೀಸ್ ಇಲಾಖೆ, ಅಗ್ನಿಶಾಮಕದಳ, ಆರೋಗ್ಯ ಇಲಾಖೆ ಮೂಲಕ ತರಬೇತಿಗಳನ್ನು ನಡೆಸಲಾಗುತ್ತಿದೆ. ಪ್ರಾತ್ಯಕ್ಷಿಕೆಗಳನ್ನು (Mock Drill Exercise) ಏರ್ಪಡಿಸಿ ವಿಪತ್ತು ನಿರ್ವಹಣಾ ಚಟುವಟಿಕೆಗಳಲ್ಲಿ ಪರಿಣತಿ ಹೊಂದಲು ಸ್ವಯಂಸೇವಕರಿಗೆ ಪೂರಕ ವ್ಯವಸ್ಥೆ ಮಾಡಲಾಗಿದೆ. ಮಾಜಿ ಸೈನಿಕರು, ನಿವೃತ್ತ ಆರಕ್ಷಕರು, ವೈದ್ಯಕೀಯ ಮುಖ್ಯಸ್ಥರು, ಸಾಮಾಜಿಕ ರಂಗದ ಪ್ರಮುಖರು ಮುಂತಾದವರ ಭಾಗವಹಿಸುವಿಕೆಯಲ್ಲಿ ತರಬೇತಿ ಏರ್ಪಡಿಸಿ ಸ್ವಯಂಸೇವಕರ ಪುನಶ್ಚೇತನ ಕಾರ್ಯ ಕೈಗೊಳ್ಳಲಾಗಿದೆ.





## 2.12ಮುಕ್ತಿ ತಂಡ ರಚನೆ:



ಕೋವಿಡ್ ಸೋಂಕು ವ್ಯಾಪಕವಾಗಿ ಪಸರಿಸಿದ ದಿನಗಳಲ್ಲಿ ಕೋವಿಡ್ ಸೋಂಕಿನಿಂದ ಮರಣ ಹೊಂದಿದವರ ಅಂತ್ಯ ಸಂಸ್ಕಾರವನ್ನು ವಿಪತ್ತು ನಿರ್ವಹಣೆ ಸ್ವಯಂಸೇವಕರು ಮಾಡಿರುತ್ತಾರೆ. ನಿರ್ಗತಿಕರು, ಭಿಕ್ಷುಕರು, ವಾರಸುದಾರರು ಇದ್ದಾಗ್ಯೂ ಸಹ ಸೋಂಕು ಹರಡುವ ಭೀತಿಯಿಂದ ಅಂತ್ಯ ಸಂಸ್ಕಾರಕ್ಕೆ ಹಿಂದೇಟು ಹಾಕಿದ ಸಂದರ್ಭದಲ್ಲಿ ಮೃತ ಶರೀರವನ್ನು ತಮ್ಮ ಪ್ರಾಣದ ಹಂಗು ತೊರೆದು ಅತ್ಯಂತ ಗೌರವಯುತವಾಗಿ ಅಂತಿಮ ಸಂಸ್ಕಾರ ನಡೆಸಿರುತ್ತಾರೆ. ಕೋವಿಡ್ ಎರಡನೆಯ ಅಲೆಯ ಸಂದರ್ಭದಲ್ಲಿ ಸರಿಸುಮಾರು ಮೂರು ತಿಂಗಳುಗಳ ಕಾಲ ಶವ ಸಂಸ್ಕಾರದ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಇವರಿಗೆ ಆರೋಗ್ಯ ಇಲಾಖೆಯು ಪರಿಣಿತ ವೈದ್ಯರಿಂದ ಸುರಕ್ಷಿತವಾಗಿ ಶವ ಸಂಸ್ಕಾರ ನಡೆಸುವ ಕುರಿತು ತರಬೇತಿ ನೀಡಿದ್ದು ಪಿಪಿಇ ಕಿಟ್ ಗಳನ್ನು ಧರಿಸುವುದು, ಸ್ಯಾನಿಟೈಸರ್ ಬಳಕೆ, ವೈಯಕ್ತಿಕ ಮುನ್ನೆಚ್ಚರಿಕೆ ವಹಿಸುವುದರ ಬಗ್ಗೆ ಮಾಹಿತಿಯನ್ನು ನೀಡಿತ್ತು. ಶೌರ್ಯ ಮುಕ್ತಿ ತಂಡದ ಸ್ವಯಂಸೇವಕರು 358 ಮೃತ ದೇಹದ ಅಂತ್ಯ ಸಂಸ್ಕಾರ ನಡೆಸಿ ಮಾನವೀಯತೆ ಮೆರೆದಿದ್ದಾರೆ. ಅಂತ್ಯ ಸಂಸ್ಕಾರ ನಡೆಸಲೆಂದು 6 ಮುಕ್ತಿ ತಂಡ ರಚನೆ ಮಾಡಿದ್ದು ಅವು ಈ ಕೆಳಗಿನಂತಿದೆ.

| ಕ್ರ.ಸಂ. | ತಾಲ್ಲೂಕು | ಮುಕ್ತಿತಂಡದ ಹೆಸರು | ಹೊಂದಿರುವ ಸ್ವಯಂಸೇವಕರು |
|---|---|---|---|
| 01 | ಮೂಡಿಗೆರೆ | ಕಸಬಾ ಘಟಕ | 14 |
| 02 | ಮೂಡಿಗೆರೆ | ಬಣಕಲ್ ಘಟಕ | 08 |
| 03 | ಭಟ್ಕಳ | ಭಟ್ಕಳ ಘಟಕ | 06 |
| 04 | ಭಟ್ಕಳ | ಅಂಕೋಲಾ ಘಟಕ | 08 |
| 05 | ಅಥಣಿ | ಉಗಾರ ಘಟಕ | 09 |
| 06 | ವಿರಾಜಪೇಟೆ | ನಾಪೋಕ್ಲು ಘಟಕ | 06 |

## 2.13 ಲಾಕ್ ಡೌನ್ ಸಮಯದಲ್ಲಿ ತುರ್ತು ಸೇವೆಗೆ ವಾಹನ ಬಳಕೆ:

ಕೋವಿಡ್ ಸೋಂಕಿನ ವ್ಯಾಪಕತೆ ಅಧಿಕವಾಗುತ್ತಿದ್ದಂತೆಯೇ ರೋಗಿಗಳನ್ನು ಆಸ್ಪತ್ರೆಗೆ ಕೊಂಡೊಯ್ಯಲು ಹಾಗೂ ಗುಣಮುಖರಾದವರನ್ನು ಮನೆಗೆ ತಲುಪಿಸಲು ವಾಹನದ ಕೊರತೆ ಉಂಟಾದ ಸಂದರ್ಭದಲ್ಲಿ ವಿಪತ್ತು ನಿರ್ವಹಣೆ ಸ್ವಯಂಸೇವಕರು ತಮ್ಮ ಸ್ವಂತ ವಾಹನವನ್ನೇ ಅಂಬುಲೆನ್ಸ್ ರೀತಿಯಲ್ಲಿ ಬಳಸಿಕೊಂಡು ತಮ್ಮ ಸಾಮಾಜಿಕ ಪ್ರಜ್ಞೆ ಮೆರೆದಿದ್ದಾರೆ. ಕೋವಿಡ್ ಸೋಂಕಿತರನ್ನು ಕೊಂಡೊಯ್ಯುವಾಗ ತಮಗೆ ಅಪಾಯ ಇದ್ದರೂ ಸಹ ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲು, ಆಸ್ಪತ್ರೆಯಿಂದ ಮನೆಗೆ ಕರೆತರಲು ಸಹಾಯ ಮಾಡಿದ್ದಾರೆ. ತಮ್ಮ ವಾಹನಕ್ಕೆ ಉಚಿತ ಸೇವೆ ಎನ್ನುವ ನಾಮಫಲಕ ಹಾಕಿಕೊಂಡು, ತಮ್ಮ ಮೊಬೈಲ್ ಸಂಖ್ಯೆಯನ್ನು ಪ್ರಚಾರ ಮಾಡಿ ಸೇವೆ ಸಲ್ಲಿಸಿದ್ದಾರೆ. 468 ಸ್ವಯಂಸೇವಕರು ತಮ್ಮ ವಾಹನಗಳನ್ನು ಸೇವೆಗೆ ಬಳಸಿಕೊಂಡಿದ್ದು 3,400 ಕ್ಕೂ ಅಧಿಕ ಮಂದಿ ಸ್ವಯಂಸೇವಕರು ನಿಗದಿಪಡಿಸಿದ ವಾಹನದ ಪ್ರಯೋಜನ ಪಡೆದುಕೊಂಡಿದ್ದಾರೆ.

## 2.14 ಕೋವಿಡ್ ಕೇರ್ ಸೆಂಟರ್‌ನಲ್ಲಿ ಸೇವೆ:



ಕೋವಿಡ್ ಕಾಯಿಲೆಯಿಂದ ಬಳಲುತ್ತಿರುವವರ ಚಿಕಿತ್ಸೆಗೆಂದು ಸರ್ಕಾರ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ತೆರೆದಿರುವ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ವಿಪತ್ತು ನಿರ್ವಹಣಾ ಸ್ವಯಂಸೇವಕರು ಕೋವಿಡ್ ಸೋಂಕಿತರ ಆರೈಕೆಯಲ್ಲಿ ತೊಡಗಿಕೊಂಡು ತಮ್ಮ ಸಾಮಾಜಿಕ ಪ್ರಜ್ಞೆ ಮೆರೆದಿದ್ದಾರೆ. ಕೋವಿಡ್ ಸೋಂಕಿತರಿಗೆ ಊಟ ಉಪಾಹಾರ ವ್ಯವಸ್ಥೆ, ಸ್ಯಾನಿಟೈಸರ್ ಸಿಂಪರಣೆ, ಮಾಸ್ಕ್ ಧರಿಸುವಂತೆ ಮಾಹಿತಿ ನೀಡುವುದು, ಕೇಂದ್ರದ ಆವರಣಗಳ ಸ್ವಚ್ಛತಾ ಕಾರ್ಯಗಳು ಹೀಗೆ ಹಲವು ವಿಧದ ಸೇವೆಯನ್ನು ನೀಡಿರುತ್ತಾರೆ. ಕೋವಿಡ್ ಪಾಸಿಟಿವ್ ಇರುವವರ ಹತ್ತಿರ ತೆರಳಲು ಭಯಪಡುವವರೇ ಅಧಿಕ ಮಂದಿ ಇರುವಾಗ ವಿಪತ್ತು ನಿರ್ವಹಣಾ ಸ್ವಯಂಸೇವಕರು ಅವರ ಸೇವೆಗೆ ನಿಂತು ಮಾನವೀಯತೆ ಮೆರೆದಿದ್ದಾರೆ.

ಸ್ವಯಂಸೇವಕರು ಸೇವೆ ಸಲ್ಲಿಸಿದ ಕೋವಿಡ್ ಕೇರ್ ಸೆಂಟರ್‌ಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ತಾಲ್ಲೂಕು | ಕೇಂದ್ರದ ಹೆಸರು |
|---|---|---|
| 01 | ಉಜಿರೆ | ವ್ಯಸನಮುಕ್ತಿ ಸಂಶೋಧನಾ ಕೇಂದ್ರ |
| 02 | ಧಾರವಾಡ | ಜ್ಞಾನವಿಕಾಸ ತರಬೇತಿ ಸಂಸ್ಥೆ |
| 03 | ಅಥಣಿ | ಉಗಾರ ಸಕ್ಕರೆ ಕಾರ್ಖಾನೆಯಿಂದ ತೆರೆದ ಕೇಂದ್ರ |

## 2.15 ಹೋಮ್ ಐಸೋಲೇಶನ್‌ನಲ್ಲಿ ಇರುವವರ ಮನೆ ಭೇಟಿ, ಧೈರ್ಯ ತುಂಬುವ ಕೆಲಸ:

ಕೋವಿಡ್ ಪಾಸಿಟಿವ್ ದೃಢಪಟ್ಟು ಹೋಮ್ ಐಸೋಲೇಶನ್‌ನಲ್ಲಿ ಇರುವವರ ಮಾಹಿತಿಯನ್ನು ಆರೋಗ್ಯ ಇಲಾಖೆಯಿಂದ ಪಡೆದುಕೊಂಡ ಸ್ವಯಂಸೇವಕರು ಆರೋಗ್ಯ ಕಾರ್ಯಕರ್ತರೊಂದಿಗೆ ಮನೆ ಭೇಟಿ ಸೋಂಕಿತರಿಗೆ ಹಾಗೂ ಅವರ ಕುಟುಂಬದವರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಿದ್ದಾರೆ. ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ವೈದ್ಯರಿಗೆ ಮಾಹಿತಿಯನ್ನು ನೀಡುವ ಕೆಲಸ ಮಾಡಿದ್ದಾರೆ. ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿರುವವರ ಆರೋಗ್ಯದ ಸ್ಥಿತಿಗತಿಗಳ ವಿವರಣೆ ನೀಡಿರುತ್ತಾರೆ. ತುರ್ತು ಆಸ್ಪತ್ರೆಗೆ ದಾಖಲಿಸುವ ಅಗತ್ಯ ಎದುರಾದರೆ ಅಗತ್ಯ ವ್ಯವಸ್ಥೆ ಮಾಡಿಕೊಂಡು ಆಸ್ಪತ್ರೆಗೆ ದಾಖಲಿಸುವ ಕೆಲಸ ಮಾಡಿದ್ದಾರೆ. ಕೋವಿಡ್ ಸೋಂಕಿನ ಕುರಿತು ತಪ್ಪು ಅಭಿಪ್ರಾಯಗಳು, ಕಲ್ಪನೆಗಳಿಂದ ಜನರು ಭೀತಿಗೊಳ್ಳದಂತೆ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ.

ಹೈನುಗಾರಿಕೆಯಲ್ಲಿ ತೊಡಗಿಕೊಂಡ ಕುಟುಂಬಗಳಲ್ಲಿ ಕೋವಿಡ್ ಸೋಂಕು ಪಾಸಿಟಿವ್ ಆದಾಗ ಅವರು ಎದುರಿಸಿದ ಸಮಸ್ಯೆ ಹಾಲನ್ನು ಡೈರಿಗಳಿಗೆ ತಲುಪಿಸುವುದು. ಕ್ಲಪ್ತ ಸಮಯಕ್ಕೆ ಹಾಲು ಹಿಂಡಿ ಡೈರಿಗೆ ತಲುಪಿಸಲೇ ಬೇಕಾದ ಅನಿವಾರ್ಯತೆ ಇರುವುದರಿಂದ ಹೈನುಗಾರರು ಕೋವಿಡ್ ಸಮಯದಲ್ಲಿ ತೊಂದರೆ ಅನುಭವಿಸಿದ್ದರು. ಮನೆಯಲ್ಲಿ ಒಬ್ಬರು ಕೋವಿಡ್ ಗುಣಲಕ್ಷಣ ಹೊಂದಿದ್ದರೂ ಅವರು ಡೈರಿಗೆ ಹಾಲನ್ನು ಒಯ್ಯಲು ಆಗುತ್ತಿರಲಿಲ್ಲ. ಇದರಿಂದಾಗಿ ನಷ್ಟ ಅನುಭವಿಸಬೇಕಿತ್ತು. ಇದನ್ನು ಮನಗಂಡ ಸ್ವಯಂಸೇವಕರು ಕೆಲವು ಕಡೆಗಳಲ್ಲಿ ಸರಿಸುಮಾರು ಒಂದು ತಿಂಗಳ ವರೆಗೆ ಡೈರಿಗೆ ಹಾಲು ತಲುಪಿಸಲು ಸಹಾಯ ಮಾಡಿರುತ್ತಾರೆ. ಗುರುವಾಯನಕೆರೆ, ಸುಳ್ಯ, ಕುಮಟಾ, ಹೊನ್ನಾವರ, ಕೊಪ್ಪ, ಶೃಂಗೇರಿ ಭಾಗದ ಸ್ವಯಂಸೇವಕರು ಈ ರೀತಿಯ ಸೇವೆಯಲ್ಲಿ ತೊಡಗಿಕೊಂಡು ಸಾಮಾಜಿಕ ಪ್ರಜ್ಞೆ ಮೆರೆದರು.



ಹಾಲು ಡೈರಿಗೆ ತಲುಪಿಸಲು ನೆರವಾದ ಸ್ವಯಂಸೇವಕರು

## 2.16 ಸ್ವಯಂಸೇವಕರಿಗೆ ಅಂಬುಲೆನ್ಸ್ ಕೊಡುಗೆ:



ತುರ್ತು ಸ್ಪಂದನಾ ಚಟುವಟಿಕೆಗಳಲ್ಲಿ ಸ್ಪಂದಿಸುತ್ತಿರುವ ವಿಪತ್ತು ನಿರ್ವಹಣಾ ಸ್ವಯಂಸೇವಕರ ಕಾರ್ಯಶೈಲಿಯನ್ನು ಗಮನಿಸಿದ ಅಂಕೋಲಾ-ಕಾರವಾರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀಮತಿ ರೂಪಾಲಿ ನಾಯ್ಕ್ ರವರು ಸ್ವಯಂಸೇವಕರ ತಂಡಕ್ಕೆ ಉಚಿತವಾಗಿ ಅಂಬುಲೆನ್ಸ್ ನೀಡಿರುತ್ತಾರೆ. ಅಂಬುಲೆನ್ಸ್ ನಿರ್ವಹಣೆಯನ್ನು ಸ್ವಯಂಸೇವಕರು ನಿರ್ವಹಿಸುತ್ತಿದ್ದು ಅದಕ್ಕೆ ತಗಲುವ ವೆಚ್ಚವನ್ನು ಶಾಸಕರೇ ಭರಿಸಿರುತ್ತಾರೆ. ಇದರ ಪ್ರಯೋಜನವನ್ನು ಸರಿಸುಮಾರು 460 ಕ್ಕೂ ಹೆಚ್ಚು ಮಂದಿ ಪಡೆದಿರುತ್ತಾರೆ. ಅಂಕೋಲಾ ಕಾರವಾರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಾವುದೇ ತುರ್ತು ಕರೆಗಳು ಬಂದರೆ ಕೂಡಲೇ ಧಾವಿಸಿ ಸ್ಪಂದಿಸುವ ಕೆಲಸವನ್ನು ಸ್ವಯಂಸೇವಕರು ಮಾಡುತ್ತಿದ್ದಾರೆ.

## 2.17 ಮನೆ ನಿರ್ಮಾಣ:

ಬಡವರು, ಅಶಕ್ತರು, ನಿರ್ಗತಿಕರ ಮನೆಗಳನ್ನು ಗುರುತಿಸಿದ ಸ್ವಯಂಸೇವಕರು ಅವುಗಳ ರಿಪೇರಿ ಶ್ರಮದಾನವನ್ನು ನಡೆಸಿರುತ್ತಾರೆ. ಮನೆಯೇ ಇಲ್ಲದವರಿಗೆ ಸ್ಥಳೀಯ ಗ್ರಾಮಪಂಚಾಯತಿ, ಸಂಘಸಂಸ್ಥೆಗಳು, ದಾನಿಗಳ ಸಹಾಯದಿಂದ ಹೊಸ ಮನೆ ನಿರ್ಮಾಣದ ಕೆಲಸವನ್ನೂ ಮಾಡಿರುತ್ತಾರೆ. ವರದಿ ವರ್ಷದಲ್ಲಿ 21 ಮನೆಗಳನ್ನು ರಚಿಸಿದ್ದಾರೆ. ಇದುವರೆಗೆ 168 ಮನೆಗಳನ್ನು ನಿರ್ಮಾಣ ಮಾಡಿರುತ್ತಾರೆ. ಮಾತೃಶ್ರೀ ಅಮ್ಮನವರ ಕಾರ್ಯಕ್ರಮವಾದ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ರಚಿಸಲಾಗುವ ಮನೆ ನಿರ್ಮಾಣ, ರಿಪೇರಿ ಕೆಲಸಗಳಲ್ಲಿಯೂ ಸಹ ತೊಡಗಿಕೊಂಡಿರುತ್ತಾರೆ.





## 2.18 ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶೌರ್ಯ ಸ್ವಯಂಸೇವಕರು:

ದೇವಾಲಯಗಳಲ್ಲಿ ನಡೆಸಲ್ಪಡುವ ವಾರ್ಷಿಕ ಕಾರ್ಯಕ್ರಮಗಳು, ಜಾತ್ರೆಗಳು, ಹಬ್ಬಗಳು, ಉತ್ಸವಗಳ ಸಂದರ್ಭದಲ್ಲಿ ವಿಪತ್ತು ನಿರ್ವಹಣಾ ಸ್ವಯಂಸೇವಕರು ವಿವಿಧ ರೀತಿಯ ಸೇವೆಗಳನ್ನು ಸಲ್ಲಿಸಿರುತ್ತಾರೆ. ಹೊರೆ ಕಾಣಿಕೆ ಸಂಗ್ರಹಣೆ, ಅನ್ನಸಂತರ್ಪಣೆಗೆ ಸಹಕಾರ, ಜನಸಂದಣಿ, ವಾಹನ ಸಂದಣಿ ನಿಯಂತ್ರಣೆಗೆ ಸಹಕಾರ, ಸ್ವಚ್ಚತಾ ಶ್ರಮದಾನಗಳು ಹೀಗೆ ಹಲವು ವಿಧದ ಸೇವೆ ಸಲ್ಲಿಸಿರುತ್ತಾರೆ. ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ನಡೆದ ಪರ್ಯಾಯ ಉತ್ಸವದಲ್ಲಿ ಭಾಗವಹಿಸಿದ ಸ್ವಯಂಸೇವಕರು ವಿಶೇಷವಾದ ಸೇವೆ ಸಲ್ಲಿಸಿದ್ದಾರೆ. ಲಕ್ಷದೀಪೋತ್ಸವದ ಸಂದರ್ಭದಲ್ಲಿ ಉಜಿರೆಯಿಂದ ಧರ್ಮಸ್ಥಳಕ್ಕೆ 2000 ಸ್ವಯಂಸೇವಕರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಶಿವರಾತ್ರಿಯ ನಿಮಿತ್ತ ಧರ್ಮಸ್ಥಳಕ್ಕೆ ತೆರಳುವ ಪಾದಯಾತ್ರಿಗಳಿಗೆ ಹಾಸನ, ಚಿಕ್ಕಮಗಳೂರು, ಮೂಡಿಗೆರೆ, ಬೆಳ್ತಂಗಡಿ ತಾಲ್ಲೂಕಿನ ಸ್ವಯಂಸೇವಕರು ಅನ್ನಸಂತರ್ಪಣೆ, ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯ ಸೇವೆಯನ್ನು ಸ್ವಯಂಸೇವಕರು ನೀಡಿರುತ್ತಾರೆ.





## 2.19 ಬೀಚ್ ಹಾಗೂ ಚಾರ್ಮಾಡಿ ಘಟ್ಟ ಸ್ವಚ್ಛತಾ ಕಾರ್ಯಕ್ರಮಗಳು:

ಪರಿಸರ ಪೂರಕವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸ್ವಯಂಸೇವಕರು ಸ್ವಚ್ಛತಾ ಕಾರ್ಯಕ್ರಮಗಳಿಗೆ ವಿಶೇಷ ಒತ್ತು ನೀಡಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನ ನೆರಿಯಾ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರು ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಚಾರ್ಮಾಡಿ ಘಟ್ಟದ ಸ್ವಚ್ಛತಾ ಶ್ರಮದಾನ ನಡೆಸಿ ಸುಮಾರು 8 ಟಿಪ್ಪರ್ ಲೋಡ್ ಗಳಷ್ಟು ಪ್ಲಾಸ್ಟಿಕ್ ಬಾಟಲಿಗಳು, ತ್ಯಾಜ್ಯಗಳನ್ನು ತೆರವುಗೊಳಿಸಿದ್ದಾರೆ. ಕುಂದಾಪುರ ತಾಲ್ಲೂಕಿನ ವಿಪತ್ತು ನಿರ್ವಹಣಾ ಸ್ವಯಂಸೇವಕರು ಸಮುದ್ರದ ಬೀಚ್ ಸ್ವಚ್ಛತಾ ಶ್ರಮದಾನವನ್ನು ನಡೆಸಿ 4 ಲೋಡ್ ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆರವುಗೊಳಿಸಿದ್ದಾರೆ. 6 ಕಿಲೋಮೀಟರ್ ಗಳಷ್ಟು ವ್ಯಾಪ್ತಿಯಲ್ಲಿನ ತ್ಯಾಜ್ಯಗಳನ್ನು ಸ್ವಯಂಸೇವಕರು ತೆರವುಗೊಳಿಸಿರುತ್ತಾರೆ. ಅಂಕೋಲಾ, ಮುರುಡೇಶ್ವರ, ಶಿರಾಲಿ, ಕಾರವಾರದ ಸದಾಶಿವಘಡ ಘಟಕಗಳ ಸ್ವಯಂಸೇವಕರು ಸಹ ಬೀಚ್ ಸ್ವಚ್ಛತಾ ಶ್ರಮದಾನ ಕೈಗೊಂಡು ಪರಿಸರ ಪ್ರಜ್ಞೆ ಮೆರೆದಿದ್ದಾರೆ.




## 2.20 ಶಾಲೆ ಉಳಿಸಿ ಅಭಿಯಾನ:

ಸರ್ಕಾರಿ ಕನ್ನಡ ಶಾಲೆಗಳಲ್ಲಿ ಮೂಲಸೌಕರ್ಯ ಒದಗಿಸುವ ಕುರಿತಂತೆ ಸಂಬಂಧಿಸಿದ ಇಲಾಖೆಯ, ಸಂಘಸಂಸ್ಥೆಗಳ ಗಮನ ಸೆಳೆಯುವ ನಿಟ್ಟಿನಲ್ಲಿ ಮೂಡಿಗೆರೆ ತಾಲ್ಲೂಕಿನ ಖಾಂಡ್ಯ ಘಟಕದ ಸ್ವಯಂಸೇವಕರು ಸರ್ಕಾರಿ ಶಾಲೆ ಉಳಿಸಿ ಎನ್ನುವ ಹೆಸರಿನಲ್ಲಿ ಅಭಿಯಾನ ಆರಂಭಿಸಿ 28 ಶಾಲೆಗಳ ಸರ್ವೇ ಮಾಡಿ ಅಲ್ಲಿರುವ ತೊಂದರೆಗಳನ್ನು ದಾಖಲಿಸಿ ಜಿಲ್ಲಾಧಿಕಾರಿಗಳು, ಶಿಕ್ಷಣ ಇಲಾಖೆ, ವಿವಿಧ ಸಂಘ ಸಂಸ್ಥೆಗಳ ಗಮನ ಸೆಳೆದಿದ್ದರು. ಕುಡಿಯುವ ನೀರಿನ ಸಮಸ್ಯೆ, ಶೌಚಾಲಯ ಇಲ್ಲದೇ ಇರುವುದು, ಬೆಂಚು ಡೆಸ್ಕ್ ಇಲ್ಲದೇ ಇರುವುದು, ಮಳೆಯಿಂದ ಸೋರುತ್ತಿರುವುದು, ಶಿಕ್ಷಕರ ಹಾಗೂ ಸಿಬ್ಬಂದಿಗಳ ಕೊರತೆ, ನಿರ್ವಹಣೆಯ ಸಮಸ್ಯೆ ಹೀಗೆ ಕೊರತೆಗಳನ್ನು ಅಧ್ಯಯನ ಮಾಡಿದ ಸ್ವಯಂಸೇವಕರು ಸೂಕ್ತ ದಾಖಲೆಗಳನ್ನು ಸಿದ್ಧಪಡಿಸಿ ಸಂಬಂಧಿಸಿದ ಇಲಾಖೆಗಳಿಗೆ ಜನಪ್ರತಿನಿಧಿಗಳಿಗೆ ನೀಡಿದ್ದರು. ಪರಿಣಾಮವಾಗಿ ಶಾಲೆಗಳಿಗೆ ವಿಶೇಷ ಬದಲಾವಣೆ ಸಾಧ್ಯವಾಗಿರುತ್ತದೆ. ಕುಡಿಯುವ ನೀರಿನ ಫಿಲ್ಟರ್ 5 ಶಾಲೆಗೆ ವಿತರಣೆ, 2 ಶಾಲೆಗೆ ಬಣ್ಣ ಬಳಿಯುವುದು, 2 ಶಾಲೆಯ 48 ಮಕ್ಕಳಿಗೆ ಬ್ಯಾಗ್, ಪಠ್ಯ ಪುಸ್ತಕ, ಪೀಠೋಪಕರಣ ಮತ್ತು ಆಟೋಪಕರಣಗಳನ್ನು ವಿತರಣೆ ಹೀಗೆ ಅನೇಕ ಸೌಲಭ್ಯಗಳನ್ನು ವಿವಿಧ ಸಂಘ ಸಂಸ್ಥೆಗಳು ಶೌರ್ಯ ತಂಡದ ಮೂಲಕ ಒದಗಿಸಿಕೊಟ್ಟಿವೆ.



## 2.22 ವಿಪತ್ತುವಾರು ತಜ್ಞರನ್ನು ಒಳಗೊಂಡಿದೆ ಶೌರ್ಯ ತಂಡ:

ವರ್ಷದಾದ್ಯಂತ ಆಗಾಗ ಸಂಭವಿಸುವ ವಿಪತ್ತುಗಳಿವೆ. ರಸ್ತೆ ಅಪಘಾತ, ಅಡುಗೆ ಅನಿಲ ಸೋರಿಕೆಯಾಗಿ ಸ್ಫೋಟ ಸಂಭವಿಸುವುದು, ವಾಸದ ಮನೆಗೆ ಅಗ್ನಿ ತಗಲುವುದು, ಅಂಗಡಿ, ಗೋದಾಮು, ವಸತಿ ಸಂಕೀರ್ಣಗಳು, ಬಹುಮಹಡಿ ಕಟ್ಟಡಗಳು ಮುಂತಾದ ಸ್ಥಳಗಳಲ್ಲಿ ಬೆಂಕಿ ಅನಾಹುತ, ಕಾಳ್ಗಿಚ್ಚು, ನೀರಿನ ಮೂಲಗಳಲ್ಲಿ ಕಾಲು ಜಾರಿ ಬೀಳುವುದು, ಹಾವು ಕಡಿತ ಇತ್ಯಾದಿ ದುರ್ಘಟನೆಗಳು ಆಗಾಗ ಸಂಭವಿಸುತ್ತಲೇ ಇರುತ್ತವೆ. ಕೆಲವೊಮ್ಮೆ ಆಕಸ್ಮಿಕವಾಗಿ ಹಲವು ಬಾರಿ ಮನುಷ್ಯರ ನಿರ್ಲಕ್ಷ್ಯದಿಂದಲೇ ಜರಗುವ ಇವುಗಳು ತುಂಬಾ ಅಪಾಯಕಾರಿ. ಜೀವಹಾನಿಯನ್ನೂ ಉಂಟು ಮಾಡಬಹುದು. ವಿಪರೀತ ಆರ್ಥಿಕ ಸಂಕಷ್ಟಕ್ಕೆ ನೂಕಿ ಬಿಡಬಹುದು. ಇಂತಹ ಆಪತ್ತು ಎದುರಾದಾಗ ಆ ಸ್ಥಳದಲ್ಲಿ ಕ್ಷಿಪ್ರ ನೆರವಿಗೆ ಧಾವಿಸುವ ಮಂದಿ ಇಲ್ಲದೇ ಇರುವುದರಿಂದ ಸಣ್ಣ ಅವಘಡವೂ ದೊಡ್ಡ ಆಘಾತ ಉಂಟು ಮಾಡಬಲ್ಲದು. ತಾಲೂಕು ವ್ಯಾಪ್ತಿಯಲ್ಲಿ ಇಂತಹ ಯಾವುದೇ ದುರ್ಘಟನೆಗಳು ಜರುಗಿದರೂ ಅವುಗಳಿಗೆ ತಕ್ಷಣ ಸ್ಪಂದಿಸಲು ಅನುಕೂಲವಾಗುವಂತೆ, ಆಯಾ ವಿಪತ್ತಿಗೆ ಅನುಗುಣವಾಗಿ ತಜ್ಞತೆಯನ್ನು ಹೊಂದಿರುವ ಸ್ವಯಂ ಸೇವಕರನ್ನು "ಶೌರ್ಯ" ಸಮಿತಿಗೆ ಸೇರ್ಪಡೆಗೊಳಿಸಲಾಗಿದೆ.





ವಿಶೇಷ ಕೌಶಲ್ಯ ಹೊಂದಿರುವ ಸ್ವಯಂಸೇವಕರ ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ವಿಶೇಷ ತಜ್ಞತೆ | ಪ್ರಸ್ತುತ | ಒಟ್ಟು | ಕ್ರ.ಸಂ. | ವಿಶೇಷ ತಜ್ಞತೆ | ಪ್ರಸ್ತುತ | ಒಟ್ಟು |
|---|---|---|---|---|---|---|---|
| 1 | ಈಜು ತಜ್ಞರ ತಂಡ | 420 | 830 | 9 | ವೆಲ್ಡಿಂಗ್ ವೃತ್ತಿಯವರು | 6 | 18 |
| 2 | ದೋಣಿ ಚಾಲಕರು ತಂಡ | 30 | 65 | 10 | ಭಾಷಣಕಾರರು | 35 | 180 |
| 3 | ಗಾರೆ ಕೆಲಸದವರು | 356 | 856 | 11 | ಮುಳುಗು ತಜ್ಞರು | 04 | 13 |
| 4 | ಮರ ಏರುವತಜ್ಞರು | 160 | 260 | 12 | ಬೆಂಕಿ ಅವಘಡ ನಿರ್ವಹಣೆ ತಜ್ಞರು | 150 | 328 |
| 5 | ಟೈಲರ್ ವೃತ್ತಿಯವರು | 06 | 06 | 13 | ರಸ್ತೆ ಅಪಘಾತ ತಜ್ಞರು | 274 | 418 |
| 6 | ಸೆಲೂನ್ ಶಾಪ್ ಹೊಂದಿರುವವರು | 06 | 06 | 14 | ಪ್ರಥಮ ಚಿಕಿತ್ಸೆ ತಜ್ಞರು | 30 | 43 |
| 7 | ಮೆಕ್ಯಾನಿಕ್ ತಜ್ಞರು | 34 | 34 | 15 | ಇಲೆಕ್ಟ್ರಿಶಿಯನ್ | 440 | 680 |
| 8 | ವಾಹನ ಚಾಲಕರು | 680 | 1280 | 16 | ಪೈಂಟರ್ | 48 | 146 |

**ಸಾಧನ ವರದಿ**

| ಕ್ರ.ಸಂ. | ವಿಷಯ | ವರದಿ ವರ್ಷ | ಒಟ್ಟು |
|---|---|---|---|
| 1 | ಸಂಯೋಜಕರ ತರಬೇತಿ | 29 | 50 |
| 2 | ರಚಿಸಿದ ವಿಪತ್ತು ನಿರ್ವಹಣಾ ತಂಡ | 33 | 50 |
| 3 | ಸಂಯೋಜಕರ ಆಯ್ಕೆಯ ಸಮಾಲೋಚನೆ | 138 | 285 |
| 4 | ಸ್ವಯಂಸೇವಕರ ಆಯ್ಕೆಯ ಸಮಾಲೋಚನೆ ಸಭೆ | 862 | 1215 |
| 5 | ಸಂಯೋಜಕರ ಸಂಖ್ಯೆ | 94 | 357 |
| 6 | ಸ್ವಯಂಸೇವಕರ ಸಂಖ್ಯೆ | 1186 | 4698 |
| 7 | ಒಟ್ಟು ಸಂಯೋಜಕರು/ಸ್ವಯಂಸೇವಕರ ಸಂಖ್ಯೆ | 1280 | 5055 |
| 8 | ಸ್ವಯಂಸೇವಕರ ತರಬೇತಿ | 21 | 32 |
| 9 | ವಿಪತ್ತು ಕಾರ್ಯಾಚರಣೆಗಳು | 6,997 | 11,813 |
| 10 | ಸಾಮಾಜಿಕ ಸೇವೆ | 9,849 | 14,357 |
| 11 | ಒಟ್ಟು ಚಟುವಟಿಕೆಗಳು | 19061 | 26170 |
| 12 | ಒಟ್ಟು ವಿನಿಯೋಗಿಸಿದ ಮಾನವ ದಿನಗಳು | 5,305 | 1,30,850 |

## 2.23 ಅಂಕಗಳ ಮತ್ತು ವರದಿ ಕ್ರೋಢೀಕರಣ:

ತಾಲ್ಲೂಕು ಘಟಕಗಳು ನಿರ್ವಹಿಸಿದ ವಿಪತ್ತು ಸೇವೆ ಮತ್ತು ಸಾಮಾಜಿಕ ಸೇವಾ ಕಾರ್ಯಗಳಿಗೆ ಅಂಕಗಳನ್ನು ನೀಡಿ ಗುರುತಿಸುವ ಕೆಲಸ ಮಾಡಲಾಗುತ್ತಿದೆ. ಪ್ರತೀ ತಿಂಗಳ 21ನೇ ತಾರೀಕಿಗೆ ಘಟಕಗಳ ವರದಿಗಳನ್ನು ಸಂಯೋಜಕರು ಘಟಕಗಳಿಗೆ ನೀಡಿದ ಮಾಸಿಕ ವರದಿ ಪುಸ್ತಕದ ನಮೂನೆಯಲ್ಲಿ ದಾಖಲಿಸಿ ಮೇಲ್ವಿಚಾರಕರಿಗೆ ನೀಡಬೇಕು. ಮೇಲ್ವಿಚಾರಕರು ಪರಿಶೀಲಿಸಿ ಪ್ರತೀ ತಿಂಗಳ 22 ತಾರೀಕಿಗೆ ಯೋಜನಾಧಿಕಾರಿಯವರಿಗೆ ಸಲ್ಲಿಸುತ್ತಾರೆ. ಯೋಜನಾಧಿಕಾರಿಯವರು ಪ್ರತೀ ತಿಂಗಳ 25ನೇ ತಾರೀಕಿಗೆ ಆಯಾ ಪ್ರಾದೇಶಿಕ ಕಛೇರಿಗೆ ತಲುಪಿಸಿ ಪ್ರಾದೇಶಿಕ ಕಛೇರಿಯಿಂದ ಪ್ರತೀ ತಿಂಗಳ 28 ತಾರೀಕಿಗೆ ಜನಜಾಗೃತಿ ಪ್ರಾದೇಶಿಕ ವಿಭಾಗಕ್ಕೆ ಕಳುಹಿಸುವ ಕುರಿತು ಮಾಹಿತಿ ನೀಡಲಾಗಿದ್ದು, ವರದಿಗಳು ಸಮಯಕ್ಕೆ ಸರಿಯಾಗಿ ಬರುವಲ್ಲಿ ಪ್ರಯತ್ನಿಸಲಾಗುತ್ತಿದೆ. ಇದರ ಆಧಾರದ ಮೇಲೆ ಘಟಕಗಳ ಮೌಲ್ಯ ಮಾಪನವನ್ನು ಮಾಡಲಾಗುತ್ತಿದೆ. ಪ್ರತೀ ತಿಂಗಳಲ್ಲಿ ಘಟಕಗಳ

ಸಾಧನೆಯನ್ನು ತಿಳಿಸಿ ಹೆಚ್ಚಿನ ಸೇವೆಗೆ ಆದ್ಯತೆ ನೀಡುತ್ತಾ ಬರಲಾಗಿದೆ. ಸ್ವಯಂಸೇವಕರು ನಿರ್ವಹಿಸಿದ ಕಾರ್ಯಚಟುವಟಿಕೆಗಳನ್ನು ಬ್ಲಾಗ್ ಮೂಲಕ ಸಂಗ್ರಹಿಸಲಾಗಿದೆ. 5000 ಕ್ಕೂ ಅಧಿಕ ಬ್ಲಾಗ್‌ಗಳನ್ನು ತಯಾರಿಸಿದ್ದು ಸೇವಾ ಚಟುವಟಿಕೆಗಳ ದಾಖಲಾತಿ ನಿರ್ವಹಣೆ ಇದರಿಂದ ಸಾಧ್ಯವಾಗಿದೆ.



## 2.24 ಸ್ವಯಂಸೇವಕರ ಡೈರೆಕ್ಟರಿ:

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಪತ್ತು ನಿರ್ವಹಣಾ ಘಟಕಕ್ಕೆ ಸ್ವಯಂಸೇವಕರಾಗಿ ಆಯ್ಕೆಯಾದ ಸದಸ್ಯರ ವಿವರವನ್ನು ಸರ್ಕಾರದ ವಿವಿಧ ಇಲಾಖೆಗಳು, ಜಿಲ್ಲಾಧಿಕಾರಿಗಳ ಕಚೇರಿ, ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಗಣ್ಯರಿಗೆ ನೀಡುವ ಉದ್ದೇಶದಿಂದ ಡೈರೆಕ್ಟರಿ ರಚಿಸಲಾಗುವುದು. ಅದರಲ್ಲಿ ಸ್ವಯಂಸೇವಕರ ಹೆಸರು, ವಿಳಾಸ, ದೂರವಾಣಿ ಸಂಖ್ಯೆ, ಹೊಂದಿರುವ ವಿಶೇಷ ತಜ್ಞತೆ, ಸ್ವಯಂಸೇವಕರ ಭಾವಚಿತ್ರ ಮುಂತಾದ ವಿವರಗಳನ್ನು ಪ್ರಕಟಿಸಲಾಗುವುದು. ಜಿಲ್ಲೆ ಹಾಗೂ ತಾಲೂಕುವಾರು ಸಿಗುವ ಈ ಮಾಹಿತಿಯಿಂದಾಗಿ ಯಾವುದೇ ರೀತಿಯ ತೊಂದರೆಗೆ ಒಳಗಾದವರಿಗೆ ತಮ್ಮ ಹತ್ತಿರದ ವಿಪತ್ತು ಸ್ಪಂದನಾ ಸ್ವಯಂಸೇವಕರನ್ನು ಕೂಡಲೇ ಸಂಪರ್ಕಿಸಿ ಸಹಾಯ ಪಡೆಯಲು ಅನುಕೂಲವಾದಂತಾಗುತ್ತದೆ. ಪ್ರಸ್ತುತ ಮೂಡಿಗೆರೆ ತಾಲೂಕಿನ ಡೈರಕ್ಟರಿಯನ್ನು ಬಿಡುಗಡೆ ಮಾಡಲಾಗಿದೆ. ಉಳಿದಂತೆ ತಯಾರಿ ನಡೆಯುತ್ತಿದೆ.



## 2.25 ವಿಪತ್ತು ನಿರ್ವಹಣಾ ಪ್ರಾಧಿಕಾರದ ಭೇಟಿ:

ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಸಲಹೆ ಪಡೆಯಲು ಮತ್ತು ರಾಜ್ಯದಲ್ಲಿನ ಸೂಕ್ಷ್ಮ ಪ್ರದೇಶಗಳ ಕುರಿತು ಮಾಹಿತಿ ಪಡೆಯಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧೀಕಾರ, ಬೆಂಗಳೂರು, ಎನ್.ಡಿ.ಆರ್.ಎಫ್ ಪಡೆ ಮಹದೇವಪುರ, ಬೆಂಗಳೂರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧೀಕಾರಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಕೊಡಗು, ಚಿಕ್ಕಮಗಳೂರು, ಹಾಸನ, ಧಾರವಾಡ, ಬೆಳಗಾವಿ, ಗದಗ ಇವುಗಳನ್ನು ಭೇಟಿ ಮಾಡಲಾಗಿದೆ. ಪ್ರಾಧೀಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ ವಿಪತ್ತು ನಿರ್ವಹನೆ ಚಟುವಟಿಕೆಗಳಿಗೆ ತಂಡವನ್ನು ರಚಿಸಲು ಅನುಮತಿ, ತರಬೇತಿ ಆಯೋಜನೆಗೆ ಸಹಕಾರ ಪಡೆದುಕೊಳ್ಳಲಾಗಿದೆ. ತಾಲ್ಲೂಕು ತಹಶೀಲ್ದಾರರನ್ನು ಪ್ರತೀ ಘಟಕಗಳ ಉದ್ಘಾಟನೆಗೆ ಆಹ್ವಾನಿಸಿ ಅವರ ಸಲಹೆ ಸೂಚನೆ ಪಡೆದುಕೊಳ್ಳಲಾಗಿದೆ.

## 2.26 ಮಾಹಿತಿ ಪತ್ರ ಮತ್ತು ತರಬೇತಿ ಕೈಪಿಡಿ:

ವಿಪತ್ತು ನಿರ್ವಹಣೆಯ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸ್ವಯಂಸೇವಕರಿಗೆ ನೀಡಲು ಪ್ರಾಕೃತಿಕ ದುರಂತಗಳು ಮತ್ತು ನಿರ್ವಹಣೆ ಎನ್ನುವ ಮಾಹಿತಿ ಕೈಪಿಡಿ ರಚಿಸಿ ಎಲ್ಲಾ ಸ್ವಯಂಸೇವಕರಿಗೆ ವಿತರಿಸಲಾಗಿದೆ. ವಿವಿಧ ವಿಪತ್ತು ನಿರ್ವಹಣಾ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ ಪತ್ರವನ್ನೂ ತಯಾರಿಸಲಾಗಿದೆ. ತರಬೇತಿಗೆ ಅಗತ್ಯವಿರುವ ಸಾಮಗ್ರಿಗಳನ್ನು ಸಂಗ್ರಹಿಸಿದ್ದು ತರಬೇತಿಯ ಸಂದರ್ಭದಲ್ಲಿ ಸ್ವಯಂಸೇವಕರಿಗ್ಗೆ ವಿತರಿಸಲಾಗಿದೆ.

ವಿಪತ್ತು ನಿರ್ವಹಣಾ ವಿಭಾಗದ ಕಾರ್ಯಕ್ರಮಗಳಿಗೆ ತಗಲಿದ ಖರ್ಚುವೆಚ್ಚಗಳ ವಿವರ

| ಕ್ರ. ಸಂ. | ವಿಷಯ | ವರದಿ ವರ್ಷ | ಇದುವರೆಗೆ ಒಟ್ಟು |
|---|---|---|---|
| 1 | ಸಂಯೋಜಕರ ತರಬೇತಿ | 4,23,811.00 | 6,16,657.00 |
| 2 | ಸಂಯೋಜಕರ ಸಭೆ | 1,74,617.00 | 2,21,068.00 |
| 3 | ಸ್ವಯಂ ಸೇವಕರ ತರಬೇತಿ | 6,98,744.00 | 19,77,844.00 |
| 4 | ಮಾಸಿಕ ಸಭೆ | 1,71,319.00 | 3,95,097.00 |
| 5 | ರಕ್ಷಣಾ ಪರಿಕರಗಳ ಖರೀದಿ | 24,29,941.00 | 52,58,446.00 |
| 6 | ವಿಪತ್ತಿನ ತುರ್ತು ಸ್ಪಂದನೆ ಚಟುವಟಿಕೆಗಳು | 1,56,878.00 | 2,11,515.00 |
| 7 | ಸಮವಸ್ತ್ರ ಖರೀದಿ | 12,58,080.00 | 24,93,392.00 |
| 8 | ಪಾದಯಾತ್ರೆ | 3,00,114.00 | 3,00,114.00 |
| 9 | ಗಿಡನಾಟಿ | 67,275.00 | 67,275.00 |
| 10 | ವಿಶೇಷ ಮಂಜೂರಾತಿ | 1,15,650.00 | 1,15,650.00 |
| 11 | ಮಾಹಿತಿ ಕೈಪಿಡಿ | 32,000.00 | 32,000.00 |
| 12 | ತರಬೇತಿ ಕೈಪಿಡಿ | 14,000.00 | 14,000.00 |
| 13 | ಮಾಸಿಕ ವರದಿ ಪುಸ್ತಕ | 80,000.00 | 80,000.00 |
| 14 | ಶೌರ್ಯ ಸಾಧನೆ | 14,239.00 | 14,239.00 |
| | ಒಟ್ಟು | 59,36,668.00 | 1,17,97,297.00 |

## 2.27 ಸುತ್ತೋಲೆಗಳು:

ವಿಪತ್ತು ನಿರ್ವಹಣಾ ಕಾರ್ಯಕ್ರಮ ಹಾಗೂ ಸಾಮಾಜಿಕ ಅರಣ್ಯೀಕರಣದ ಬಗ್ಗೆ ಕಾರ್ಯನಿರ್ವಾಹಕ ನಿರ್ದೇಶಕರ ಮೂಲಕ ಹಾಗೂ ಜನಜಾಗೃತಿ ಪ್ರಾದೇಶಿಕ ವಿಭಾಗದ ಮೂಲಕ ಸುತ್ತೋಲೆಗಳನ್ನು ನೀಡಲಾಗಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | 31/EDOO/2020–21<br>21.05.2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮ ಆರಂಭಿಸುವ ಕುರಿತು. |
| 2 | 95/EDOO/2020–21<br>08.08.2020 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಅನುಷ್ಠಾನದ ಕುರಿತು. |
| 3 | 209/EDOO/2020–21<br>29.03.2021 | ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಸಮಿತಿಯ ಘಟಕಗಳ ಸಲಕರಣೆ ಮತ್ತು ಪರಿಕರಗಳ ನಿರ್ವಹಣೆಯ ಕುರಿತು. |
| 4 | 36/EDOO/2021–22<br>15.06.2021 | ಯೋಜನೆಯ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಅನುಷ್ಠಾನದ ಕುರಿತು. |
| 5 | 139/ EDOO/2021–22<br>21.03.2022 | ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಅನುಷ್ಠಾನದ ಕುರಿತು. |
| 6 | 16/EDOO/2022–23<br>25.05.2022 | ಯೋಜನೆಯ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದ ಅನುಷ್ಠಾನದ ಕುರಿ |